**ಸಾಕ್ಷಿಯನ್ನು ದಿಃ 23.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ನಾನು ಅಪಘಾತವನ್ನು ಕಣ್ಣಾರೆ ಕಂಡಿರುವುದಿಲ್ಲ. ನಮ್ಮ ಆಸ್ಪತ್ರೆಗೆ ಬರುವ ಮೊದಲು ಗಾಯಾಳು ಕೆ.ಆರ್ ಆಸ್ಪತ್ರೆಗೆ ಹೋಗಿದ್ದರು. ಕೆ.ಆರ್ ಆಸ್ಪತ್ರೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಸದರಿ ಆಸ್ಪತ್ರೆಯಿಂದ ನವಗೆ ರೆಫರೆನ್ಸ್ ಲೆಟರ್ ಇತ್ತು. ಅದನ್ನು ನಾನು ಹಾಜರು ಪಡಿಸಿಲ್ಲ. ಮೊದಲ ಬಾರಿ ಗಾಯಾಳು ದಿಃ 01.08.2024 ರಂದು ಬಂದಿದ್ದಾರೆ. ಮೊದಲ ಬಾರಿಗೆ ನಾನೇ ಅವರನ್ನು ಪರೀಕ್ಷಿಸಿದ್ದೇನೆ. ದಿಃ 17.08.2024 ರಂದು ಗಾಯಾಳು ಬಿಡುಗಡೆಗೊಂಡಿದ್ದಾರೆ ಎಂದರೆ ಸರಿ. ಎಂ.ಎಲ್.ಸಿ ರಿಜಿಸ್ಟರ್ ನಾವು ಹಾಜರು ಪಡಿಸಿಲ್ಲ. ಗಾಯಾಳು ಬಿಡುಗಡೆಗೊಂಡ ನಂತರ ಹೊರರೋಗಿಯಾಗಿ ಅಂದಾಜು 20 ಬಾರಿ ಬಂದಿರಬಹುದು. ಆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಅವರು ಹೊರರೋಗಿಯಾಗಿ ನಮ್ಮ ಆಸ್ಪತ್ರೆಗೆ ಬಂದಿಲ್ಲ ಎಂದರೆ ಸರಿಯಲ್ಲ. ಕೊನೆಯದಾಗಿ ದಿಃ 15.09.2025 ರಂದು ನಮ್ಮ ಆಸ್ಪತ್ರೆಗೆ ಬಂದಿದ್ದಾರೆ. ಅವರು ನ್ಯೂನತೆಯನ್ನು ಪರೀಕ್ಷಿಸಿಕೊಳ್ಳಲು ಬಂದಿದ್ದರು ಎಂದರೆ ಸರಿಯಲ್ಲ. ದಿಃ 15.09.2025 ರಂದು ಪರೀಕ್ಷಿಸಿದ ದಾಖಲೆಗಳ ಆಧಾರದ ಮೇಲೆಯೇ ನಾನು ನ್ಯೂನತೆಯನ್ನು ನಿರ್ಧರಿಸಿದ್ದೇನೆ. ದಿಃ 15.09.2025 ಕ್ಕೆ ಮೊದಲು ಗಾಯಾಳು ತನಗೆ ತೊಂದರೆ ಇದೆ ಎಂದು ಆಸ್ಪತ್ರೆಗೆ ಬಂದ ಬಗ್ಗೆ ನಾನು ದಾಖಲೆ ಹಾಜರು ಪಡಿಸಿಲ್ಲ. ಆದ ಕಾರಣ ದಿಃ 15.09.2025 ರಂದು ಗಾಯಾಳುವಿಗೆ ನ್ಯೂನತೆಯನ್ನು ನಿರ್ಧರಿಸುವ ಉದ್ದೇಶದಿಂದಲೇ ಪರೀಕ್ಷಿಸಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೂ ಮೊದಲು ಗಾಯಾಳುವನ್ನು ಪರೀಕ್ಷಿಸಿಲ್ಲ ಎಂದರೆ ಸರಿಯಲ್ಲ.

2. ನಾನು ಜಿಲ್ಲಾ ವೈಧ್ಯಕೀಯ ಮಂಡಳಿಯ ಸದಸ್ಯನಲ್ಲ. ನಾನು ಹಾಜರು ಪಡಿಸಿರುವ ನ್ಯೂನತ ಪ್ರಮಾಣ ಪತ್ರ ನ್ಯೂನತ ದೃಢೀಕರಣ ಪತ್ರ ಅಲ್ಲ. ಕೊನೆಯಬಾರಿ ಗಾಯಾಳು ದಿಃ 08.03.2025 ರಂದು ದಾಖಲಾದಾಗ ವಕ್ರವಾಗಿ ಮೂಳೆಗಳು ಕೂಡಿಕೊಂಡಿರುವುದು ತಿಳಿಯಿತು. ಮೂಳೆಗಳು ವಕ್ರವಾಗಿ ಕೂಡಿಕೊಂಡಿರುವುದು ನಮ್ಮ ನಿರ್ಲಕ್ಷ್ಯತನದಿಂದ ಆಗಿದೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಪ್ರಮಾಣ ಪತ್ರದಲ್ಲಿ ತೋರಿಸಿರುವ ಚಿಕಿತ್ಸೆ ಅಲ್ಲದೇ ಬೇರೆ ಚಿಕಿತ್ಸೆ ಲಭ್ಯವಿದೆ. ಮೊದಲಿಗೆ ಓರಿಫ್ ಮಾಡಬೇಕಾಗಿತ್ತು

ನಾವು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಮಾಡಲೇಬೇಕಾದ ಅಗತ್ಯ ಇಲ್ಲ ಎನ್ನುತ್ತಾರೆ. ಓರಿಫ್ ಮಾಡದೇ ಸೆಕೆಂಡರಿ ಚಿಕಿತ್ಸೆ ಕೊಟ್ಟ ಕಾರಣ ಗಾಯಾಳುವಿಗೆ ತೊಂದರೆ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಓರಿಫ್ ಅನ್ನು ಸಹ ಮಾಡಿದ್ದೇನೆ ಎನ್ನುತ್ತಾರೆ. ಗಾಯಾಳುವಿಗೆ ಫಿಜಿಯೋತೆರಫಿಗೆ ಸಲಹೆ ನೀಡಿದ್ದೆ ಆ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ನಾನು ಆ ರೀತಿ ಸಲಹೆ ನೀಡದೇ ಇರುವ ಕಾರಣ ಗಾಯಾಳುವಿಗೆ ಮೂಳೆಗಳು ಸರಿಯಾಗಿ ಕೂಡಿಕೊಂಡಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಆದ ಫ್ರಾಕ್ಚರ್ ಗರಿಷ್ಠ ಆರು ತಿಂಗಳ ಒಳಗೆ ಕೂಡಿಕೊಳ್ಳುತ್ತದೆ ಎಂದರೆ ಸರಿ. ಗಾಯಾಳು ನ್ಯೂನತೆ ನಿರ್ಧರಿಸಿಕೊಳ್ಳಲು ವೈಧ್ಯಕೀಯ ಮಂಡಳಿಗೂ ಸಹ ಹೋಗಬಹುದು ಎಂದರೆ ಸರಿ. ನ್ಯೂನತೆಯನ್ನು ನಾನು ಗೈಡ್ ಲೈನ್ಸ್‌ಪ್ರಕಾರ ಮಾಡಿದ್ದೇನೆ ಎಂದರೆ ಸರಿ.

3. ಲೋಯರ್ ಲಿಂಬ್ ಮೂರು ಭಾಗಗಳಾಗಿ ಇದೆ ಎಂದರೆ ಸರಿ. ಮೊಬಿಲಿಟಿ ಕಾಂಪೊನೆಂಟ್ ನಲ್ಲಿ ನೀ ಗೆ ಸಂಬಂಧಿಸಿದಂತೆ ಮಾತ್ರ ನಮೂದಿಸಿದ್ದೆ ಎಂದರೆ ಸರಿ. ನಾರ್ಮಲ್ ರೇಂಜ್ ಆಫ್ ಮೂವ್‌ಮೆಂಟ್ 140 ಇರಬೇಕು ಬದಲಾಗಿ 125 ಎಂದು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನಾನು abduction rotation ಅನ್ನು ನಮೂದಿಸಿಲ್ಲ ಎಂದರೆ ಅದು ನೀ ಜಾಯಂಟ್ ಗೆ ಬರುವುದಿಲ್ಲ ಎನ್ನುತ್ತಾರೆ. ಮಜಲ್‌ಸ್ಟ್ರೆಂತ್ ಬಗ್ಗೆ ಲೆಕ್ಕಾಚಾರ ಮಾಡಿರುವುದು ಸರಿ ಇಲ್ಲ ಎಂದರೆ ಸರಿಯಲ್ಲ. ನನ್ನ ಲೆಕ್ಕಚಾರದ ಪ್ರಕಾರ ಸಹ ಶೇಕಡ 9 ಕ್ಕಿಂತ ಹೆಚ್ಚು ನ್ಯೂನತೆ ಬರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ಗಾಯಾಳುವಿಗೆ ಯಾವುದೇ ನ್ಯೂನತೆ ಇಲ್ಲದೇ ಇದ್ದರೂ ಅವರಿಗೆ ಸಹಾಯ ಮಾಡಲು ಶೇಕಡಾ 40 ಪ್ರತಿಶತ ನ್ಯೂನತೆ ಇದೆ ಎಂದು ತಪ್ಪಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.